**<u>ಸಾಕ್ಷಿಯನ್ನು ಈ ದಿನ ದಿಃ 26.07.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ</u>**

1. ಈ ಪ್ರಕರಣದ ಚಾ.ಸಾ. 1 ರವರು ನಮ್ಮ ತಂದೆಯವರು ಸ್ಥಾಪಿಸಿದ್ದಂತಹ ಮೈಸೂರು ಜಿಲ್ಲಾ ಪರಿಹಾರ ಸಮಿತಿಯ ಕಾರ್ಯ ದರ್ಶಿಯಾಗಿದ್ದರು ಎನ್ನುವುದು ಸರಿ. ಸಾಕ್ಷಿ ಪುನಃ ನುಡಿಯುತ್ತಾರೆ , ಈಗಲೂ ಸಹ ಅವರೇ ಅದರ ಕಾರ್ಯದರ್ಶಿ ಎಂದು. ಜೊತೆಗೆ ಅವರು ನನ್ನೊಂದಿಗೆ ನನ್ನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾರೆ ಎನ್ನುವುದು ಸರಿಯಲ್ಲ. ಚಾ,ಸಾ. 1 ನನ್ನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರೂ ಸಹ , ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಚಾ,ಸಾ. 1 ನನ್ನ ಸಹಪಾಠಿ ಎಂದು. ಚಾ,ಸಾ.3 ರಿಂದ ಚಾ,ಸಾ. 14 ರವರು ನಮ್ಮ ಪಕ್ಷದ ಕಾರ್ಯ ಕರ್ತರು , ನನ್ನ ಸ್ನೇಹಿತರು ಮತ್ತು ನನ್ನ ಸಹಪಾಠಿಗಳು ಎನ್ನುವುದು ಸರಿ . ಚಾ,ಸಾ. 3 ರಿಂದ ಚಾ,ಸಾ. 14 ರವರೊಂದಿಗೆ ನನ್ನ ಸಂಬಂಧ ಈಗಲೂ ಚೆನ್ನಾಗಿದೆ ಎನ್ನುವುದು ಸರಿ . 1994 ರಲ್ಲಿ ನನ್ನ ತಂದೆ ಚುನಾವಣೆಯಲ್ಲಿ ಬಿ.ಜೆ.ಪಿಯ ಮಾರುತಿರಾವ್ ಪವಾರ್ ರವರ ವಿರುದ್ಧ ಸೋತಿದ್ದರು ಎನ್ನುವುದು ಸರಿ . ನಂತರದಲ್ಲಿ ನಾನು ನನ್ನ ತಂದೆಯವರೊಂದಿಗೆ ಇದ್ದು ಮುಂದಿನ ಚುನಾವಣೆಯಲ್ಲಿ ನನ್ನ ತಂದೆ ಗೆದ್ದರು ಎನ್ನುವುದು ಸರಿ . ಸಾಕ್ಷಿ ಸ್ವತಃ ನುಡಿಯುತ್ತಾರೆ , ನನ್ನ ತಂದೆ ಮೇಲೆ ಹೇಳಿದ 1994 ರ ಚುನಾವಣೆಯಲ್ಲಿ ಸೋಲುವ ಮುಂಚಿತವಾಗಿಯೂ ರಾಜಕೀಯವಾಗಿ ಸಕ್ರಿಯವಾಗಿ ನನ್ನನ್ನು ತೊಡಗಿಸಿಕೊಂಡಿದ್ದೆ ಎಂದು. ನಂತರ ನಾನು 1996 ರಲ್ಲಿ ಪಕ್ಷೇತರನಾಗಿ ನಗರ ಸಭಾ ಚುನಾವಣೆಯಲ್ಲಿ ಗೆದ್ದಿರುತ್ತೇನೆ ಎನ್ನುವುದು ಸರಿ. 2008 ರಿಂದ ನಿಮಗೆ

ವೈಯಕ್ತಿಕವಾಗಿ ಪ್ರಬಲವಾದ ರಾಜಕೀಯ ಪಕ್ಷ ಎಂದರೆ ಎಸ್.ಡಿ.ಪಿ.ಐ. ಎಂದು ಮಾಡಿದ ಸಲಹೆಗೆ ಸಾಕ್ಷಿ , ಅದೊಂದು ರಾಜಕೀಯ ಪಕ್ಷ ಅಷ್ಟ ಆದರೆ ಪ್ರಬಲವಾದ ಎದುರಾಳಿ ಅಲ್ಲ ಎನ್ನುತ್ತಾರೆ. 2013 ನೇ ಚುನಾವಣೆಯಲ್ಲಿ ಎಸ್ ಡಿ ಪಿ ಐ ಪಕ್ಷ ಬಹಳ ಕಡಿಮೆ ಅಂತರದ ಮತಗಳಿಂದ ಸೋತಿತ್ತು ಎನ್ನುವುದು ಸರಿ .

2. ನಾನು ಮಾಜಿ ಮಂತ್ರಿಯಾಗಿರುವುದರಿಂದ ಮತ್ತು ಶಾಸಕನಾಗಿರುವುದರಿಂದ **VIP Cadre** ನಲ್ಲಿದ್ದೇನೆ ಎನ್ನುವುದು ಸರಿ . ನನಗೆ ಅಂಗ ರಕ್ಷಕರನ್ನು ಕೊಟ್ಟಿದ್ದಾರೆ. ಉಳಿದಂತೆ ಬೇರೆ ಯಾವುದೇ ರೀತಿಯ **VIP** ಸವಲತ್ತುಗಳನ್ನು ಪಡೆದುಕೊಂಡಿರುವುದಿಲ್ಲ. ಸರ್ಕಾರದವರೇ ಆ ಸವಲತ್ತುಗಳನ್ನು ನನಗೆ ನೀಡಿರುತ್ತಾರೆ ಎನ್ನುವುದು ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಎಸ್ ಡಿ ಪಿ ಐ , ಪಕ್ಷದ ಕಾರ್ಯ ಕರ್ತರು ನಾನು ಚುನಾವಣಾ ಪ್ರಚಾರ ಕಾರ್ಯಗಳಿಗೆ ಹೋದಾಗ ಗುಂಪು ಕಟ್ಟಿಕೊಂಡು ಬಂದು ಗಲಾಟೆ ಮಾಡುವುದು , ನನ್ನ ಕಾರ್ಯ ಕ್ರಮಗಳಿಗೆ ಅಡ್ಡಿ ಪಡಿಸುವುದು ಮಾಡುತ್ತಿದ್ದರು ಎಂದು ಹೇಳಿರುತ್ತೇನೆ ಎನ್ನುವುದು ಸರಿ . ಈ ಬಗ್ಗೆ ನಾನು ಎಲ್ಲಿಯೂ ದೂರನ್ನು ನೀಡಿರುವುದಿಲ್ಲ. ಅವುಗಳನ್ನು ಪೋಲೀಸರು ಅಲ್ಲಲ್ಲಿಯೇ ಸರಿ ಪಡಿಸುತ್ತಿದ್ದರು. ಎಸ್ ಡಿ ಪಿ ಐ ಪಕ್ಷದ ಕಾರ್ಯ ಕರ್ತರು ಯಾವುದೇ ರೀತಿಯ ಗಲಾಟೆ ಮಾಡದೇ ಇರುವುದರಿಂದ ನಾನು ದೂರನ್ನು ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ. ನನಗೆ ವೈಯಕ್ತಿಕವಾಗಿ ತೊಂದರೆಯಾದಾಗ ನಾನು ಏನು ಮಾಡಬೇಕು, ಎಲ್ಲಿಗೆ ಹೋಗಬೇಕು ಎನ್ನುವುದು ಗೊತ್ತಿದೆ ಎನ್ನುವುದು ಸರಿ .

3. ದಿಃ 09.01.2020 ರಂದು ನಾನು ಮೈಸೂರಿನ ಕಾರಾಗೃಹಕ್ಕೆ ಬರಬೇಕು ಎಂದು ಪೋಲೀಸರು ನೋಟೀಸನ್ನು ನೀಡಿದ್ದರು. ಪೋಲೀಸರು ನನಗೆ ಯಾವುದೇ ನೋಟೀಸನ್ನು ಈ ಬಗ್ಗೆ ನೀಡಿರಲಿಲ್ಲ ಎನ್ನುವುದು ಸರಿಯಲ್ಲ.

4. ನಾನು ದಿಃ 25.11.2019 ರಂದು ಆಸ್ಪತ್ರೆಯಿಂದ (ಕೊಲಂಬಿಯಾ ಏಷಿಯಾ) ಬಿಡುಗಡೆ ಹೊಂದಿದ್ದೆ ಎನ್ನುವುದು ಸರಿ. ನಂತರ ಪೋಲೀಸರು ಮೈಸೂರಿನ ಕಾರಾಗೃಹಕ್ಕೆ ಆರೋಪಿತರನ್ನು ಗುರುತುಹಚ್ಚಲು ಬರಬೇಕು ಎಂದು ನೋಟೀಸನ್ನು ನೀಡಿದ್ದರು. ಸಾಕ್ಷಿ ಸ್ವತಃ ನುಡಿಯುತ್ತಾರೆ , ಈ ನಡುವೆ ನಾನು ಬೆಂಗಳೂರಿನಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದು, ಮೈಸೂರಿನ ಪೋಲೀಸರು ಅಲ್ಲಿಗೆ ಬಂದು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ ಎಂದು. ಪೋಲೀಸರು ಬೆಂಗಳೂರಿಗೆ ಬಂದು ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ ಎನ್ನುವುದು ಸರಿಯಲ್ಲ.

5. ಆ ದಿನ 1 ನೇ ಆರೋಪಿಯನ್ನು ಗುರುತುಹಚ್ಚಲು ನನ್ನನ್ನು ಕಾರಾಗೃಹದ ಒಳಗೆ ತಹಸೀಲ್ದಾರರು ಮತ್ತು ಕಾರಾಗೃಹದ ಸಿಬ್ಬಂದಿ ಕರೆದುಕೊಂಡು ಹೋಗಿದ್ದರು. ಘಟನೆಗೂ ಮುನ್ನ ನನಗೆ 1 ನೇ ಆರೋಪಿ ಯಾರು, ಆತನ ಹೆಸರೇನು, ಆತನ ತಂದೆಯ ಹೆಸರೇನು ಮತ್ತು ಆತನ ವಿಳಾಸದ ಬಗ್ಗೆ ನನಗೆ ಗೊತ್ತಿರಲಿಲ್ಲ. ಘಟನೆಯಾದ ನಂತರ, ಘಟನೆಯ ಬಗ್ಗೆ ಮಾಧ್ಯಮಗಳಲ್ಲಿ ಬಂದ ನಂತರ ನಾನು 1 ನೇ ಆರೋಪಿಯನ್ನು ನೋಡಿದೆ ಎನ್ನುವುದು ಸರಿ. ಘಟನೆ ನಡೆಯಿತು ಎನ್ನಲಾದ ಸಂಧರ್ಬದಲ್ಲಿ 1 ನೇ ಆರೋಪಿ ಧರಿಸಿದ್ದ ಬಟ್ಟೆಯನ್ನು, ಆತನನ್ನು ಗುರುತು ಹಚ್ಚುವ ಪ್ರಕ್ರಿಯಯ ಸಂಧರ್ಬದಲ್ಲಿ ಆತ ಧರಿಸಿರಲಿಲ್ಲ. ಮೂರು ಬಾರಿ ಆರೋಪಿಯನ್ನು ಗುರುತಿಸುವ ಪ್ರಕ್ರಿಯಯಲ್ಲಿ , ಪ್ರತಿ ಬಾರಿ ನಾನು ಒಳಗೆ ಹೋಗಿ ಹೊರಗೆ ಬರುತ್ತಿದ್ದೆ. ಅಲ್ಲಿ ಒಳಗೆ ಯಾರು ಯಾರನ್ನು

ಯಾವ ರೀತಿಯಲ್ಲಿ ಬದಲಾಯಿಸುತ್ತಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ , 1 ನೇ ಆರೋಪಿ ಆ ಸಂಧರ್ಬದಲ್ಲಿ ಖುದ್ದು ನನ್ನಲ್ಲಿ ಕ್ಷಮೆ ಕೇಳಿದಾಗ ಆತನೇ 1 ನೇ ಆರೋಪಿ ಎನ್ನುವುದು ಇನ್ನೂ ನನಗೆ ಖಚಿತವಾಯಿತು. ಈ ವಿಷಯವನ್ನು ನಾನು ಆ ಗುರುತಿಸುವಿಕೆಯ ಪ್ರಕ್ರಿಯಯಲ್ಲಿ ಬರೆದ ವರದಿಯಲ್ಲಿ ಹೇಳಿ ಬರೆಸಿರುವುದಿಲ್ಲ. ಅಲ್ಲಿದ್ದ ತಹಸೀಲ್ದಾರ್ ಮತ್ತು ಕಾರಾಗೃಹದ ಸಿಬ್ಬಂದಿಯವರಿಗೆ ಆತ ನನ್ನಲ್ಲಿ ಕ್ಷೆಮೆ ಕೇಳಿದ್ದು ತಿಳಿದು ಬಂತು. ನಾನು ಈ ವಿಷಯವನ್ನು ಪೋಲೀಸರಿಗೆ ತಿಳಿಸಿರುವುದಿಲ್ಲ. 1 ನೇ ಆರೋಪಿ ನನ್ನನಲ್ಲಿ ಕ್ಷಮೆ ಕೇಳಿರುವುದಿಲ್ಲ ಮತ್ತು ನಾನು 1 ನೇ ಆರೋಪಿಯನ್ನು ಗುರುತಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ಆದ್ದರಿಂದ ಈ ವಿಷಯವನ್ನು ನಾನು ಪೋಲೀಸರಿಗೆ ತಿಳಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ಹಾಗೂ ಈ ಬಗ್ಗೆ ಆ ಪ್ರಕ್ರಿಯಯ ಬಾಬ್ತು ವರದಿಯಲ್ಲಿ ಹೇಳಿ ಬರೆಸಿರುವುದಿಲ್ಲ ಎನ್ನುವುದು ಸರಿಯಲ್ಲ.

6. ನಾನು ನನ್ನ ಮುಖ್ಯ ವಿಚಾರಣೆಯ ಪ್ಯಾರಾ 3 ರಲ್ಲಿ ತಿಳಿಸಿರುವ ವಿಷಯಗಳನ್ನು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ಈ ರೀತಿ ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ.

7. ನಾನು ನನ್ನ ಮುಖ್ಯ ವಿಚಾರಣೆಯ ಪ್ಯಾರಾ 3 ರಲ್ಲಿ ಕೇಳಿದ ಪ್ರಶ್ನೆ ಅಂದರೆ 2009 ರಲ್ಲಿ ಕ್ಯಾತಮಾರನಹಳ್ಳಿಯಲ್ಲಿ ಏನು ನಡೆಯಿತು ಎನ್ನುವ ಪ್ರಶ್ನೆಗೆ ನೀಡಿದ ಉತ್ತರವನ್ನು ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲೂ ಸಹ ತಿಳಿಸಿರುತ್ತೇನೆ. ಈ ರೀತಿಯಲ್ಲಿ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ.

8. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 4 , 5, 6 ಮತ್ತು 11 ರಲ್ಲಿ ಹೇಳಿರುವಂತೆ, ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲೂ ಸಹ ತಿಳಿಸಿರುತ್ತೇನೆ.

9. ನಾನು ನನ್ನ ಮುಖ್ಯ ವಿಚಾರಣೆಯ ಪ್ಯಾರಾ 8 ರಲ್ಲಿ ತಿಳಿಸಿದಂತಹ ಘಟನೆ ನಡೆದಿರುವುದಿಲ್ಲ ಎನ್ನುವುದು ಸರಿಯಲ್ಲ. ಹಾಗೆಯೇ 1 ನೇ ಆರೋಪಿ ನನ್ನ ಮೇಲೆ ಹಲ್ಲೆ ಮಾಡಿರುವುದಿಲ್ಲ ಮತ್ತು ಆತ ಓಡಿ ಹೋಗುತ್ತಿದ್ದ ಸಂದರ್ಭದಲ್ಲಿ ಎಡವಿ ಬಿದ್ದು ಜನರ ಕೈಗೆ ಸಿಕ್ಕಿಹಾಕಿಕೊಂಡಿರುವುದಿಲ್ಲ ಎನ್ನುವುದು ಸರಿಯಲ್ಲ.

10. ಈ ಘಟನೆ ನಡೆದ ಸಂದರ್ಭದಲ್ಲಿ ನಾನು ಶಾಸಕನಾಗಿದ್ದರಿಂದ ಸಂಬಂಧಪಟ್ಟ ಕಾರ್ಯವ್ಯಾಪ್ತಿಯ ಪೋಲೀಸರು ನನ್ನೊಂದಿಗೆ ಇದ್ದರು ಎನ್ನುವುದು ಸರಿಯಲ್ಲ. ಸ್ಥಳದಲ್ಲಿ ಪೋಲೀಸರು ಕಾರ್ಯಕ್ರಮಕ್ಕಾಗಿ ಇದ್ದರು. ನನಗಾಗಿ ಇರಲಿಲ್ಲ. ಆ ದಿನ ಆ ಸಮಯದಲ್ಲಿ ಸಂಬಂಧಪಟ್ಟ ಪೋಲೀಸರು ನನ್ನ ಭದ್ರತೆಗಾಗಿಯೇ ಬಂದಿದ್ದರು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ನನ್ನೊಂದಿಗೆ ನನ್ನ ಗನ್ ಮ್ಯಾನ್ ಚಾ,ಸಾ. 8 ಇದ್ದರು. ನನ್ನ ಭದ್ರತೆಗಾಗಿಯೇ ಆತ ಇರುತ್ತಾನೆ ಎನ್ನುವುದು ಸರಿ. ಶೂಟಿಂಗಟ್ ನಲ್ಲಿ ಟ್ರೆನಿಂಗ್ ಪಡೆದಂತಹ ವ್ಯಕ್ತಿಯನ್ನೇ ಗನ್ ಮ್ಯಾನ್ ಆಗಿ ನೀಡಿರುತ್ತಾರೆ ಎನ್ನುವುದು ಸರಿ. ನನ್ನ ಜೀವಕ್ಕೆ ಅಪಾಯ ಇರುತ್ತದೆ ಎನ್ನುವ ಸಂದರ್ಭದಲ್ಲಿ ಮತ್ತು ಅಪಾಯವಾದ ನಂತರದಲ್ಲಿಯೂ , ಗನ್ ಮ್ಯಾನ್ ಶೂಟ್ ಮಾಡಬಹುದು ಎನ್ನುವುದು ಸರಿ. ಘಟನೆ ನಡೆಯಿತು ಎನ್ನಲಾದ ಸಮಯದಲ್ಲಿ ನನ್ನ ಗನ್ ಮ್ಯಾನ್ ನನ್ನ ಮೇಲೆ ಹಲ್ಲೆ ಮಾಡಿದ ಹಲ್ಲೆಕೋರನ ಮೇಲೆ ಶೂಟ್ ಮಾಡಿರುವುದಿಲ್ಲ. ಅಂತಹ ಯಾವುದೇ ಘಟನೆ ನಡೆಯದೇ ಇದ್ದುದ್ದರಿಂದ ನನ್ನ ಗನ್ ಮ್ಯಾನ್ ಆ ವ್ಯಕ್ತಿಯನ್ನು ಶೂಟ್ ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ.

11. ಎಂ ಒ 8 ರಿಂದ 14 ನ್ನು ಪೋಲೀಸರು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತಾರೆ ಎನ್ನುವುದು ಸರಿಯಲ್ಲ.

12. 2009 ರ ಏಪ್ರಿಲ್ ತಿಂಗಳಿನಲ್ಲಿ ಕ್ಯಾತಮಾರನಹಳ್ಳಿಯ ಮಸೀದಿಯ ಆಸ್ತಿಯ ವಿಚಾರಕ್ಕೆ ಸಂಬಂಧಪಟ್ಟಂತೆ ನಡೆದ ಗಲಾಟೆಯಲ್ಲಿ ಅಮಾಯಕರ ವಿರುದ್ಧ ದಾಖಲಿಸಿದ್ದ ಪ್ರಕರಣವನ್ನು ಸರ್ಕಾರ ಹಿಂಪಡೆದಿರುತ್ತದೆ. ಈ ಪ್ರರಕಣದಲ್ಲಿ ಬಹು ಪಾಲು ಮುಸ್ಲಿಂ ಜನಾಂಗದ ವ್ಯಕ್ತಿಗಳಿಗೆ ನಾನು ಸಹಾಯ ಮಾಡಿರುತ್ತೇನೆ ಎನ್ನುವುದು ಸರಿ.

13. ಹುಣಸೂರಿನ ಡಬಲ್ ಮರ್ಡರ್ ಕೇಸನಲ್ಲೂ ಸಹ 14 ಜನ ಮುಸ್ಲಿಂ ಜನಾಂಗದ ಆರೋಪಿತರಿಗೆ ವಕೀಲರನ್ನು ನೇಮಿಸಿಕೊಟ್ಟು ಅವರು ನ್ಯಾಯಾಲಯದಿಂದ ಬೈಲ್ ಮೇಲೆ ಬಿಡುಗಡೆಯಾಗಲು ಸಹಾಯ ಮಾಡಿರುತ್ತೇನೆ ಎಂದರೆ ಸರಿ . ಮುಸ್ಲಿಂ ಪರವಾಗಿ ನಾನು ಬಹಳ ಸಹಾಯ ಮಾಡುತ್ತಿದ್ದರಿಂದ ಹಿಂದೂ ಸಂಘಟನೆಗಳು ನನ್ನ ಮೇಲೆ ದ್ವೇಷ ಇಟ್ಟುಕೊಂಡಿದ್ದವು ಎನ್ನುವುದು ಸರಿಯಲ್ಲ. ಈ ದ್ವೇಷದ ಹಿನ್ನೆಲೆಯಲ್ಲಿ , ರಾಜಕೀಯವಾಗಿ ನನಗೆ ಪ್ರತಿ ಸ್ಪದಿರ್ಯಾಗಿದ್ದ ಪಕ್ಷದ ಅಮಾಯಕ ಕಾರ್ಯಕರ್ತರ ವಿರುದ್ಧ ನಾನು ಈ ಪ್ರಕರಣವನ್ನು ದಾಖಲಿಸುವಂತೆ ಪ್ರೇರೇಪಿಸಿರುತ್ತೇನೆ ಎನ್ನುವುದು ಸರಿಯಲ್ಲ. ಈಗಲೂ ಸಹ ಹಿಂಧು ಸಂಘಟನೆಯ ಕಾರ್ಯಕರ್ತರು ನನಗೆ ಜೀವ ಬೆದರಿಕೆ ಹಾಕಿರುವುದು ಸಾಮಾಜಿಕ ಜಾಲತಾಣಗಳಲ್ಲಿ ಕಂಡು ಬರುತ್ತದೆ ಎನ್ನುವುದು ಸರಿ .

14. ದಿಃ 18.11.2022 ರಂದು ಸಕಲೇಶ್ಪುರದ ಬಜರಂಗದ ಕಾರ್ಯ ಕರ್ತ ರಘು ಟಿಪ್ಪು ಪ್ರತಿಮೆಯ ವಿಚಾರವಾಗಿ ನನಗೆ ಜೀವ ಬೆದರಿಕೆ ಹಾಕಿದ್ದರಿಂದ , ಆತನ ವಿರುದ್ಧ ಮೈಸೂರಿನ ಉದಯಗಿರಿ ಪೋಲೀಸ್ ಠಾಣೆಯಲ್ಲಿ ಆತನ ವಿರುದ್ಧ ಪ್ರಕರಣವನ್ನು

ದಾಖಲಿಸಲಾಗಿರುತ್ತದೆ ಎನ್ನುವುದು ಸರಿ . ಸಾಕ್ಷಿ ಸ್ವತಃನುಡಿಯುತ್ತಾರೆ , ನನ್ನ ಪಕ್ಷದ ಕಾರ್ಯಕರ್ತರು ಆ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದು.

15. ಈ ಘಟನೆಯಾದ ನಂತರ ನಾನು ತನಿಖಾಧಿಕಾರಿಯ ಮೇಲೆ ಒತ್ತಡವನ್ನು ಹೇರಿ ನನಗೆ ಯಾವ ರೀತಿ ಬೇಕೋ ಆ ರೀತಿ ತನಿಖೆಯನ್ನು ಪ್ರತಿ ಹಂತದಲ್ಲೂ ಮಾಡಿಸಿ, ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸುವಂತೆ ಪ್ರಭಾವ ಬೀರಿರುತ್ತೇನೆ ಎನ್ನುವುದು ಸರಿಯಲ್ಲ.

16. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ 3 ರಿಂದ 8 ನೇ ಆರೋಪಿತರ ಪರ ವಕೀಲರಿಂದಃ</u>**

17. ಎಸ್ ಡಿ ಪಿ ಐ ಪಕ್ಷದಲ್ಲಿ ಮುಸ್ಲಿಂಯೇತರ ನಾಯಕರು ಮತ್ತು ಕಾರ್ಯ ಕರ್ತರು ಇದ್ದಾರೆ ಎಂದು ಮಾಡಿದ ಸಲಹೆಗೆ ಸಾಕ್ಷಿ "ಇರಬಹುದು" ಎನ್ನುತ್ತಾರೆ. ದೇವನೂರು ಪಟ್ಟನಂಜಯ್ಯ , ಕಿರಣ್ ಕುಮಾರ್ , ಸ್ವಾಮಿ, ಕುಮಾರಸ್ವಾಮಿ, ಅಲಾಫ್ನೋ ಫ್ರಾಂಕೋ , ಬಾಸ್ಕರ್ ಪ್ರಸಾದ್ , ವಕೀಲರಾದ ಸಿದ್ದಪ್ಪಾಜಿ , ಜಸ್ಟಿಸ್ ಕೋಲ್ಸೆ ಪಾಟೀಲ್ ಇವರುಗಳೆಲ್ಲಾ ಎಸ್ ಡಿ ಪಿ ಐ ಪಕ್ಷದ ನಾಯಕರುಗಳು ಎಂದು ಮಾಡಿದ ಸಲಹೆಗೆ ಸಾಕ್ಷಿ , "ಇರಬಹುದು" ಎನ್ನುತ್ತಾರೆ. ನನ್ನ ಕ್ಷೇತ್ರದಲ್ಲೇ ಎಸ್ ಡಿ ಪಿ ಐ ಪಕ್ಷಕ್ಕೆ ದಲಿತರು, ಕ್ರೈ ಸ್ತರು , ಹಿಂದುಳಿದವರು, ಹಿಂಧೂಗಳು, ಬೆಂಬಲಿಗರು ಇದ್ದಾರೆ ಎಂದು ಮಾಡಿದ ಸಲಹೆಗೆ ಸಾಕ್ಷಿ "ಇರಬಹುದು" ಎನ್ನುತ್ತಾರೆ.

18. ನನ್ನ ಮುಖ್ಯ ವಿಚಾರಣೆಯ 3 ನೇ ಪ್ಯಾರಾದಲ್ಲಿ ಎಸ್ ಡಿ ಪಿ ಐ ಪಕ್ಷದ ಸೈತಾಂತಿಕ ನಿಲುವು ಎಂದರೆ ಕೇವಲ ಒಂದು ಜಾತಿಯ ಜನರನ್ನು ಅಂದರೆ ಮುಸ್ಲಿಂ ಜನಾಂಗವನ್ನು ಮಾತ್ರ ಓಲೈಸುವುದಾಗಿರುತ್ತದೆ ಎನ್ನುವುದು ಸುಳ್ಳು ಎಂದು ಮಾಡಿದ ಸಲಹೆಗೆ ಸಾಕ್ಷಿ , ನಾನು ನನ್ನ ಅಭಿಪ್ರಾಯವನ್ನು ಹೇಳಿರುತ್ತೇನೆ ಎನ್ನುತ್ತಾರೆ . ನಾನು ಯಾವುದಾದರು ಸರ್ಕಾರಿ ಕಾರ್ಯಕ್ರಮಗಳಿಗೆ ಹೋಗುವುದಾದರೆ ಆ ವಿಷಯವನ್ನು ನನ್ನ ಪಿಎ ರವರು ನಮೂದಿಸಿ ಸಂಬಂಧಪಟ್ಟ ಪಕ್ಷದ ಕಾರ್ಯ ಕರ್ತರಿಗೆ ಕಳುಹಿಸಿರುತ್ತಾರೆ. ಮದುವೆ ಮತ್ತು ವೈಯಕ್ತಿಕ ಸಂಬಂಧಗಳ ಕಾರ್ಯಕ್ರಮಗಳಿಗೆ ಹೋಗುವುದಾದರೆ ಅದು ನನ್ನ ವಿವೇಚನೆಗೆ ಬಿಟ್ಟಂತಹದಾಗಿರುತ್ತದೆ.

19. ಎಸ್ ಡಿ ಪಿ ಐ ಪಕ್ಷದ ಕಾರ್ಯಕರ್ತರು ನಾನು ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾಗ ಗುಂಪು ಕಟ್ಟಿಕೊಂಡು ಬಂದು ಗಲಾಟೆ ಮಾಡಿದಾಗ , ನನ್ನ ಕಾರ್ಯ ಕ್ರಮಗಳಿಗೆ ಅಡ್ಡಿ ಪಡಿಸಿದಾಗ, ಅಲ್ಲಿದ್ದ ಸಂಬಂಧಪಟ್ಟ ಪೋಲೀಸರು ಯಾವುದೇ ಕ್ರಮವನ್ನು ಅವರ ವಿರುದ್ಧ ಕೈಗೊಂಡಿರುವುದಿಲ್ಲ.

20. ಆ ದಿನದ ಕಾರ್ಯ ಕ್ರಮ ನನಗೆ ಬಹಳ ಹತ್ತಿರ ಸಂಬಂಧಿಕರ ಕಾರ್ಯಕ್ರಮವಾಗಿದ್ದರಿಂದ , ನಾನು ಆ ಕಾರ್ಯಕ್ರಮಕ್ಕೆ ಹೋಗುವ ವಿಷಯವನ್ನು ಯಾರಲ್ಲಿಯೂ ಹೇಳಿರಲಿಲ್ಲ. ನನ್ನ ಸಿಬ್ಬಂದಿ ನನ್ನ ಜೊತೆಯಲ್ಲಿದ್ದರು.

21. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 5 ರಲ್ಲಿ , 'ವಿಶೇಷವಾಗಿ ಮುಸ್ಲಿಂ ಜನಾಂಗದ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಇರುವಂತಹ ಪ್ರದೇಶದಲ್ಲಿ ನನ್ನ ಮೇಲೆ ಗಲಾಟೆ ಮಾಡುವಂತಹದ್ದು , ಪ್ರಚಾರಕ್ಕೆ ಅಡ್ಡಿಪಡಿಸುವಂತಹ ಪ್ರಸಂಗಗಳು ನಡೆಯುತ್ತಿದ್ದವು. ರಾೀ ರೀತಿ ಘಟನೆಗಳು ಮೈಸೂರಿನ ನರಸಿಂಹರಾಜ ಕ್ಷೇತ್ರದ ಕೆಸರೆ ಭಾಗ , ಶಾಂತಿ ನಗರ ಭಾಗ,

ರಾಜೀವ ನಗರ , ಬನ್ನಿಮಂಟಪ , ಬಡೇ ಮಖಾನ್ ಗಳಲ್ಲಾ ನಡೆದಿತ್ತು ' ಎಂದು ಹೇಳಿದ್ದೇನೆ. ಆದರೆ ಈ ಘಟನೆಗಳ ಬಗ್ಗೆ ಎಲ್ಲಿಯೂ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ ಎನ್ನುವುದು ಸರಿ. ಸೈದಾಂತಿಕ ವ್ಯತ್ಯಾಸಗಳು ಎಲ್ಲಾ ಪಕ್ಷಗಳಲ್ಲೂ ಇದ್ದಾಗಿಯೂ ಸಹ ನಾನು ಎಸ್ ಡಿ ಪಿ ಐ ನ ನಾಯಕರುಗಳಾದ ಅಬ್ದುಲ್ ಮಜೀದ್ , ದ್ವಾರಕನಾಥ ಇನ್ನಿತರರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದೇನೆ ಎನ್ನುವುದು ಸರಿ. ಸಾಕ್ಷಿ ಸ್ವತಃ ನುಡಿಯುತ್ತಾರೆ , ನಾನು ಎಲ್ಲಾ ರಾಜಕೀಯ ಪಕ್ಷದ ಮುಖಂಡರೊಂದಿಗೆ ಉತ್ತಮ ಸಂಬಂಧ ಹೊಂದಿದ್ದೇನೆ ಎನ್ನುತ್ತಾರೆ.

22. ನನ್ನ ರಾಜಕೀಯದ ಪ್ರಾರಂಭದ ದಿನಗಳಿಂದಲೂ ಬಿ ಜೆ ಪಿ ಪಕ್ಷ ನನ್ನನ್ನು ವಿರೋದಿಸುತ್ತಲೇ ಬಂದಿದೆ ಎನ್ನುವುದು ಸರಿ. ರಾಜಕೀಯವಾಗಿ ನನ್ನ ಪಕ್ಷಕ್ಕೆ ಯಾರು ಯಾರು ವಿರೋದಿಗಳಿದ್ದಾರೋ ಅವರೆಲ್ಲರೂ ನನ್ನನ್ನು ರಾಜಕೀಯವಾಗಿ ವಿರೋದಿಸುತ್ತಲೇ ಬಂದಿದ್ದಾರೆ. ಸಂಘ ಪರಿವಾರದ ಸಂಘಟನೆಗಳು ಮೈಸೂರಿನಲ್ಲಿ ನನ್ನ ವಿರುದ್ಧ ಹಲವಾರು ಪ್ರತಿಭಟನೆಗಳನ್ನು ರಾಜಕೀಯವಾಗಿ ಮಾಡಿದ್ದಾರೆ ಎನ್ನುವುದು ಸರಿ . ನಾನು ಮುಸಲ್ಲಾನರನ್ನು ಪುಷ್ಟೀಕರಿಸುತ್ತೇನೆ ಎನ್ನುವ ಆಪಾದನೆ ಬಂದಿರುತ್ತದೆ ಎನ್ನುವುದು ಸರಿಯಲ್ಲ.

23. ರಾಜಕೀಯವಾಗಿ ಪ್ರತಿಪಕ್ಷದ ಕಾರ್ಯಕರ್ತರು ವಿರೋದವನ್ನು ವ್ಯಕ್ತಪಡಿಸುವುದು ಸಾಂವಿಧಾನಿಕ ಮೂಲ ಭೂತ ಹಕ್ಕು ಎನ್ನುವುದು ಸರಿ .

24. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 8 ರ ಪುಟ ಸಂಖ್ಯೆ 4 ರಲ್ಲಿ ತಿಳಿಸಿರುವಂತೆ ಅಲ್ಲಿ ಗ್ರೂಪ್ ಪೋಟೋ ತೆಗೆದುಕೊಳ್ಳಲು ನಾನು ಮದುವೆಗೆ ಬಂದಿದ್ದವರೊಂದಿಗೆ ವೇದಿಕೆಗೆ ಹೋಗಿದ್ದೆ.

25. 2013 ರಲ್ಲಿ ಶಿವಾಜಿ ನಗರದ ಶಾಸಕರಾದ ರಿಜ್ವಾನ್ ಹರ್ಷದ್ ರವರು ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಸ್ವರ್ದಿಸಲು ಪೈಪೋಟಿ ನಡೆಸಿದ್ದರು ಎನ್ನುವುದು ಸರಿ. ಹೀಗಾಗಿ ಕಾಂಗ್ರೆಸ್ ನಲ್ಲಿ ನನ್ನನ್ನು ವಿರೋದಿಸುವ ಒಂದು ಬಣವೂ ಸಹ ಆಗಿನಿಂದಲೇ ಇದೆ ಎಂದು ಮಾಡಿದ ಸಲಹೆಗೆ , "ಸಾಕ್ಷಿ ಇರಬಹುದು ಎನ್ನುತ್ತಾರೆ " . ಸಾಕ್ಷಿ ಸ್ವತಃ ನುಡಿಯುತ್ತಾರೆ , ಟಿಕೇಟ್ ಗಾಗಿ ಪೈಪೋಟಿ ನಡೆದಿತ್ತು. ನಂತರದಲ್ಲಿ ನನ್ನನ್ನು ಕಾಂಗ್ರೆಸ್ ನ ಎಲ್ಲಾ ಕಾರ್ಯಕರ್ತರು ಮತ್ತು ನಾಯಕರು ಶ್ರಮಿಸಿ ಗೆಲ್ಲಿಸಿದ್ದರು ಎನ್ನುತ್ತಾರೆ. ನಿಮಗೆ ಎಲ್ಲಾ ಅರ್ಹತೆಗಳಿದ್ದರೂ ಸಹ, ನಿಮ್ಮನ್ನು ಸಚಿವನನ್ನಾಗಿ ಆಯ್ಕೆ ಮಾಡಲು ಕಾಂಗ್ರೆಸ್ ನ ಒಂದು ಬಣ ಬಿಡಲಿಲ್ಲ, ಬಿಡುತ್ತಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ , 'ಈ ಬಗ್ಗೆ ನನಗೆ ಗೊತ್ತಿಲ್ಲ " ಎನ್ನುತ್ತಾರೆ.

26. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 13 ರಲ್ಲಿ 1 ನೇಆರೋಪಿ ನನ್ನ ಮೇಲೆ ಹಲ್ಲೆ ಮಾಡಲು ಕಾರಣ ಏನು ಎನ್ನುವುದು ನನಗೆ ತಿಳಿದಿಲ್ಲ , ಈ ಬಗ್ಗೆ ತನಿಖಾಧಿಕಾರಿಗಳು ಯಾವುದೇ ಕಾರಣವನ್ನು ದೋಷಾರೋಪಣೆ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ ಎಂದು ಹೇಳಿರುತ್ತೇನೆ ಎನ್ನುವುದು ಸರಿ. ನಾನು 'ಪ್ರಸ್ತುತ' **Magzine** ನಲ್ಲಿ ನೀಡಿದ ಸಂದರ್ಶನದಲ್ಲಿ "ನನ್ನ ಮೇಲಿನ ಹಲ್ಲೆಗೂ ಎಸ್ ಡಿ ಪಿ ಐ ಗೂ ಸಂಬಂಧ ಖಾತವಾಗಿಲ್ಲ ರಾಜಕೀಯ ಪಕ್ಷಗಳನ್ನು ಸೈದಾಂತಿಕವಾಗಿ ಎದುರಿಸಿ ಎಂದು ಹೇಳಿದ್ದೇನೆ " ಎಂದರೆ ಸರಿ . ಸದರಿ ಹೇಳಿಕೆಯ ಭಾಗವನ್ನು ನಿಡಿ 2 ಎಂದು ಗುರುತುಪಡಿಸಿಕೊಳ್ಳಲಾಯಿತು.

27. ನಿಮ್ಮ ಮೇಲೆ ನಡೆದ ಹಲ್ಲೆಗೂ , 3 ರಿಂದ 8 ನೇ ಆರೋಪಿತರಿಗೂ , ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದು ಮಾಡಿದ ಸಲಹೆಗೆ, ಸಾಕ್ಷಿ "ದೂರನ್ನು ಕೊಟ್ಟಿದ್ದೇವೆ , ನಂತರ

ತನಿಖಾಧಿಕಾರಿಯವರು ತನಿಖೆ ನಡೆಸಿ ಎಲ್ಲಾ ಆರೋಪಿತರನ್ನು ಗುರುತಿಸಿದ್ದಾರೆ , ಆ ರೀತಿಯಲ್ಲಿ 3 ರಿಂದ 8 ನೇ ಆರೋಪಿತರ ಎಸ್ ಡಿ ಪಿ ಐ ಪಕ್ಷದ ಜೊತೆಗಿನ ಸಂಬಂಧದ ಬಗ್ಗೆ ನಾನು ಇಲ್ಲಿ ಹೇಳಿದ್ದೇನೆ ಎನ್ನುತ್ತಾರೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು 2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇವೆ ಎನ್ನುತ್ತಾರೆ.**

**ಮರು ವಿಚಾರಣೆಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಕನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಎ ಒ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಮೈಸೂರು.